# ಕ.ರಾ.ರ.ಸಾ.ನಿಗಮಃಮೈಸೂರು(ಗ್ರಾ)ವಿಭಾಗಃಮೈಸೂರು

ಸಂ:ಕರಾಸಾ/ಮೈಗ್ರಾವಿ/ಸಂ/ವಾ/ 3656 /2017-18 ದಿನಾಂಕ:- 17 -02-2018

**ಸಂಧಾನ ಪ್ರಕಟಣೆ ಸಂ:03/2017-18**

ಕ.ರಾ.ರ.ಸಾ.ನಿಗಮ ಮೈಸೂರು ಗ್ರಾಮಾಂತರ ವಿಭಾಗಕ್ಕೆ ಸೇರಿದ ಈ ಕೆಳಗಿನ ವಾಹನ ನಿಲ್ದಾಣಗಳಲ್ಲಿ ಖಾಲಿಯಿರುವ ಮಳಿಗೆಗಳನ್ನು/ತೆರೆದ ಸ್ಥಳಗಳನ್ನು ಹೇಗಿದೆಯೊ/ಎಲ್ಲಿದೆಯೋ ಹಾಗೆ ಸಂಧಾನವನ್ನು ನಡೆಸಿ ನೀಡಲು ಉದ್ದೇಶಿಸಲಾಗಿದೆ. ಪ್ರತಿ ವರ್ಷ ಲೈಸೆನ್ಸ್ ಶುಲ್ಕದ ಮೇಲೆ ಶೇ.10/- ರಷ್ಟು ಹೆಚ್ಚಳವಿರುತ್ತದೆ. ಶಾಶ್ವತ ಮಳಿಗೆಗೆ 05 ವರ್ಷದ ಅವಧಿಗೆ, ತೆರೆದ ಸ್ಥಳಕ್ಕೆ 03 ವರ್ಷದ ಅವಧಿಗೆ ಕರಾರು ಮಾಡಿಕೊಳ್ಳಲಾಗುವುದು. ಪರವಾನಗಿದಾರರನ್ನು ಸಂಧಾನದ ಮೂಲಕ ಆಯ್ಕೆ ಮಾಡುವ ಸಲುವಾಗಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ. ಸಂದಾನದ ಅರ್ಜಿಗಳನ್ನು ಅರ್ಜಿ ಶುಲ್ಕಕ್ಕೆ ಡಿ.ಡಿ ಸಲ್ಲಿಸಿ, ದಿನಾಂಕ 19-02-2018 ರಿಂದ 12-03-2018, 11.00 ಗಂಟೆಯವರೆಗೆ ಈ ಕಛೇರಿಯಲ್ಲಿ ಪಡೆಯಬಹುದಾಗಿದೆ.ದಿನಾಂಕ 12-03-2018 ರಂದು 12.30 ಗಂಟೆಗೆ ಸಂಧಾನ ಸಭೆಯನ್ನು ನಡೆಸಲಾಗುತ್ತದೆ. ಇಚ್ಚೆಯುಳ್ಳವರು ಸಂಬಂಧಿಸಿದ ಮಳಿಗೆಗಳ ಮುಂದೆ ಸೂಚಿಸಿರುವ ಇ.ಎಂ.ಡಿ. ಮೊತ್ತವನ್ನು ಡಿ.ಡಿ.ಮುಖೇನ ವಿಭಾಗೀಯ ನಿಯಂತ್ರಣಾಧಿಕಾರಿ,ಮೈಸೂರು (ಗ್ರಾ) ವಿಭಾಗ, ಮೈಸೂರು ಎಂದು ಸಲ್ಲಿಸುವುದು. ಅರ್ಜಿ ಫಾರಂ ಜೊತೆಗೆ ತಮ್ಮ ವಿಳಾಸ ದೃಡೀಕರಣ ಪತ್ರ/ಗುರುತಿನ ಚೀಟಿ/ಮೊಬೈಲ್ ಸಂಖ್ಯೆಯನ್ನು ನೀಡಿ, ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ವಿಭಾಗೀಯ ಕಛೇರಿ,ಕರಾರಸಾಸಂ,ಮೈಸೂರು ಗ್ರಾ ವಿಭಾಗ ಹನುಮಂತನಗರ,ಮೈಸೂರು ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

**ಸಂದಾನಕ್ಕೆ ಒಳಪಡುವ ಮಳಿಗೆಗಳ ವಿವರ**

| ಕ್ರ.ಸಂ | ಬಸ್ ನಿಲ್ದಾಣ | ವಾಣಿಜ್ಯ ಮಳಿಗೆಗಳ ಹೆಸರು | ವಿಸ್ತೀರ್ಣ | ಮಾಸಿಕ ಶುಲ್ಕ | ಇ.ಎಂ.ಡಿ ಡಿ.ಡಿ. ಮಾತ್ರ | ಅವಧಿ/ ವರ್ಷಗಳು | ಮೀಸಲಾತಿ | ಅರ್ಜಿ ಶುಲ್ಕ ರೂ(ಡಿಡಿ) |
|---|---|---|---|---|---|---|---|---|
| 1 | ಮಿರ್ಲೆ | ಉಪಹಾರಗೃಹ | 714.57 | 4355 | 13065 | 05 ವರ್ಷ | ಸಾಮಾನ್ಯ | 100+18 |
| 2 | ಮಿರ್ಲೆ | ಜನರಲ್ ಮಳಿಗೆ-02 | 110.61 | 674 | 2022 | 05 ವರ್ಷ | ಸಾಮಾನ್ಯ | 100+18 |
| 3 | ಹುಣಸೂರು ಗ್ರಾ ಬಸ್ ನಿಲ್ದಾಣ | (ತೆರೆದ ಸ್ಥಳ)ಸೈಕಲ್ ದ್ವಿಚಕ್ರ / ನಿಲ್ದಾಣಕ್ಕಾಗಿ | 1291.2 | 4842 | 14526 | 03 ವರ್ಷ | ಸಾಮಾನ್ಯ | 100+18 |
| 4 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-02 | 433.69 | 8786 | 26358 | 05 ವರ್ಷ | ಸಾಮಾನ್ಯ | 100+18 |
| 5 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-04 | 433.69 | 8786 | 26358 | 05 ವರ್ಷ | ಸಾಮಾನ್ಯ | 100+18 |
| 6 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-05 | 433.69 | 8786 | 26358 | 05 ವರ್ಷ | ಸಾಮಾನ್ಯ | 100+18 |
| 7 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-06 | 433.69 | 8786 | 26358 | 05 ವರ್ಷ | ಸಾಮಾನ್ಯ | 100+18 |
| 8 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-07 | 407.69 | 8259 | 24777 | 05 ವರ್ಷ | ಸಾಮಾನ್ಯ | 100+18 |
| 9 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-08 | 397.77 | 8058 | 24174 | 05 ವರ್ಷ | ಸಾಮಾನ್ಯ | 100+18 |
| 10 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-09 | 397.77 | 8058 | 24174 | 05 ವರ್ಷ | ಸಾಮಾನ್ಯ | 100+18 |
| 11 | ಹುಣಸೂರು ಗ್ರಾ ಬಸ್ ನಿಲ್ದಾಣ | ಜನರಲ್ ಮಳಿಗೆ ಸಂಖ್ಯೆ-10 | 397.77 ಚ.ಅ | 8058 | 24174 | 05 ವರ್ಷ | ಸಾಮಾನ್ಯ | 100+18 |
| 12 | ಸರಗೂರು ಬಸ್ ನಿಲ್ದಾಣ | ಜನರಲ್ ಮಳಿಗೆ ಸಂ. 04 | 139.02 ಚ.ಅ | 2686 | 8058 | 05 ವರ್ಷ | ಸಾಮಾನ್ಯ | 100+18 |
| 13 | ಸರಗೂರು ಬಸ್ ನಿಲ್ದಾಣ | ಮೊದಲನೇ ಅಂತಸ್ತು ಹಾಲ್ | 4575.69 | 58512 | 175536 | 05 ವರ್ಷ | ಸಾಮಾನ್ಯ | 600+18 |

| | | | | | | | | |
|---|---|---|---|---|---|---|---|---|
| 14 | ಕಟ್ಟೆಮಳಲವಾಡಿ | ಉಪಹಾರಗೃಹ | 301.38 | 4202 | 12606 | 05 ವರ್ಷ | ಸಾಮಾನ್ಯ | 100+18 |
| 15 | ಬಿಳಿಕೆರೆ | ಉಪಹಾರಗೃಹ | 297.94 | 4264 | 12792 | 05 ವರ್ಷ | ಸಾಮಾನ್ಯ | 100- |

ಇಚ್ಚೆಯುಳ್ಳವರು ಕೋರಿರುವ ದಾಖಲಾತಿ ಹಾಗೂ ಇ.ಎಂ.ಡಿ ಹಣವನ್ನು ಭರಿಸಿ, ನಿಯಮ ನಿಭಂದನೆಗಳನ್ನು ತಿಳಿದುಕೊಂಡು ಭಾಗವಹಿಸಬಹುದಾಗಿದೆ.

**ಸೂಚನೆಗಳು:-**

(2) ಮಳಿಗೆ/ಜಾಹೀರಾತುಗಳಿಗೆ ಪಾವತಿಸುವ ಇಎಂಡಿ ಮೊತ್ತಗಳನ್ನು ಡಿ.ಡಿ. ಮುಖೇನ ಪಾವತಿಸುವುದು. ಪ್ರತಿ ವರ್ಷ ಹಿಂದಿನ ಪರವಾನಿಗೆ ಶುಲ್ಕದ ಮೇಲೆ ಶೇ.10/- ರಷ್ಟು ಹೆಚ್ಚಾಗುವುದು. ಮಳಿಗೆಗಳನ್ನು ಉಪಯೋಗಿಸುವ ಉದ್ದೇಶವನ್ನು ಟೆಂಡರ್/ಹರಾಜು ಅರ್ಜಿಯಲ್ಲಿ ನಮೂದಿಸಬೇಕು. ಯಾವುದೇ ಕಾರಣಕ್ಕೂ ಹರಾಜು/ಟೆಂಡರ್ ಅರ್ಜಿಯಲ್ಲಿ ಸೂಚಿಸಿರುವ ವ್ಯಾಪಾರವನ್ನು ಮಾಡಲು ಮಾತ್ರ ಅವಕಾಶವಿರುತ್ತದೆ. (ಜನರಲ್ ಮಳಿಗೆಗಳಲ್ಲಿ ಒಲೆಯನ್ನು ಹಚ್ಚಿಸಲು ಅವಕಾಶ ಇರುವುದಿಲ್ಲ.ಹಾಗೂ ಉಪಹಾರ ಗೃಹ/ದರ್ಶಿನಿಗಳಿಗೆ ಅವಕಾಶ ನೀಡಲಾಗುವುದಿಲ್ಲ, ಜನರಲ್ ಮಳಿಗೆಗಳಲ್ಲಿ ಕಾನೂನು ಬಾಹಿರ/ನಿಷೇದಿಸಿರುವ ವ್ಯವಹಾರವನ್ನು ಮಾಡಲು ಸಹ ಅವಕಾಶವಿರುವುದಿಲ್ಲ) ಮಳಿಗೆಯಲ್ಲಿ ಮಾರಾಟ ಮಾಡುವ ಆಹಾರ, ತಿಂಡಿ ಪದಾರ್ಥ ಸಾಮಾಗ್ರಿ, ನೀರಿನ ಪೊಟ್ಟಣ ಇತ್ಯಾದಿ ವಸ್ತುಗಳನ್ನು ತಯಾರಕರು, ನಿರ್ದಿಷ್ಟಪಡಿಸಿದ ಎಂ.ಆರ್.ಪಿ ಬೆಲೆಗೆ ಮಾರಾಟ ಮಾಡುವುದು.ಹರಾಜು/ಟೆಂಡರ್/ಸಂಧಾನ ಪ್ರಕಟಣೆಯಲ್ಲಿ ಆಯ್ಕೆಯಾದವರು ತಮ್ಮ ಸ್ವಂತ ಖರ್ಚಿನಲ್ಲಿ ಕರ್ನಾಟಕ ಸ್ಟಾಂಪ್ ಆಕ್ಟ್ 1957 ಸೆಕ್ಷನ್ 32ಎ (ಎ)(111)ರಲ್ಲಿ ಪರಿಷ್ಕೃತ ಸ್ಟಾಂಪ್ ಅಕ್ಟ್ ನಂ:8/2003 ರನ್ವಯ ಹಾಗೂ ಕಾಲಕಾಲಕ್ಕೆ ಬದಲಾಗುವ ನಿಯಮಾವಳಿಗಳನ್ವಯ ಸ್ಟಾಂಪ್ ಶುಲ್ಕವನ್ನು ಭರಿಸಿ ಆಯ್ಕೆಗೊಂಡ 03 ದಿನದೊಳಗೆ ಕರಾರು ಒಪ್ಪಂದವನ್ನು ಮಾಡಿಕೊಳ್ಳಬೇಕಾಗಿರುತ್ತದೆ.

**ಭದ್ರತಾ ಠೇವಣಿ ವಿವರ ಈ ಕೆಳಗಿನಂತೆ ಇರುತ್ತದೆ.**

| ಕ್ರಸಂ | ಪರವಾನಗಿ ಅವಧಿ | ಪಾವತಿಸಬೇಕಿರುವ ಭದ್ರತಾ ಠೇವಣಿ |
|---|---|---|
| 1 | 3 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 6 ಪಟ್ಟು |
| 2 | 5 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 8 ಪಟ್ಟು |
| 3 | 10 ವರ್ಷ | ಅಂಗೀಕೃತ ಮಾಸಿಕ ಪರವಾನಗಿ ಶುಲ್ಕದ 10 ಪಟ್ಟು |

(2) ಆಯ್ಕೆ ಆದ ಪರವಾನಿಗೆದಾರರು ತಾವು ಸಲ್ಲಿಸಿರುವ ಇಎಂಡಿ ಹಣವನ್ನು ಭದ್ರತಾ ಠೇವಣಿಗೆ ಹೊಂದಾಣಿಕೆ ಮಾಡಿಕೊಂಡು ಸೂಚಿಸಿರುವ ಪರವಾನಿಗೆ ಶುಲ್ಕದ ಆರು/ಎಂಟು/ಹತ್ತು (06)(08)(10) ರಷ್ಟು ಹಣವನ್ನು ಭದ್ರತಾ ಠೇವಣಿಯಾಗಿ ಹರಾಜು/ಟೆಂಡರ್ ದಿನವೇ ಸ್ಥಳದಲ್ಲಿ ಡಿ.ಡಿ. ರೂಪದಲ್ಲಿ "ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕರಾರಸಾ ನಿಗಮ, ಮೈಸೂರು ಗ್ರಾಮಾಂತರ ವಿಭಾಗ, ಮೈಸೂರು" ಇವರ ಹೆಸರಿನಲ್ಲಿ ಪಾವತಿಸುವುದು.

(3) ಆಯ್ಕೆಗೊಂಡ ಪರವಾನಿಗೆದಾರರು ಪಾವತಿಸುವ ಮಾಸಿಕ ಪರವಾನಿಗೆ ಶುಲ್ಕದ ಮೇಲ ಶೇ.18(ಸರ್ಕಾರಿ ನಿಯಮದಂತೆ ಬದಲಾವಣೆಗೆ ಒಳಪಟ್ಟಿದೆ) ರಷ್ಟು ಸೇವಾ ತೆರಿಗೆ/ಜಿ.ಎಸ್.ಟಿ ಯನ್ನು ಪ್ರತಿ ತಿಂಗಳು ಪರವಾನಿಗೆ ಶುಲ್ಕದ ಜೊತೆಗೆ ಪಾವತಿಸಲು ಬದ್ಧರಾಗಿರಬೇಕು ಹಾಗೂ ತಮ್ಮ ಮಳಿಗೆಯಲ್ಲಿ ಬೆಂಕಿ ನಂದಿಸುವ ಉಪಕರಣಗಳನ್ನು ಇಟ್ಟುಕೊಳ್ಳಬೇಕು ಮತ್ತು ಬೆಂಕಿ ವಿಮೆಯನ್ನು ಮಾಡಿಸಿಕೊಳ್ಳಬೇಕು.

(4) ಭಾರತ ಸರ್ಕಾರ/ಕರ್ನಾಟಕ ಸರ್ಕಾರ/ಕರಾರಸಾ ನಿಗಮವು ಆಗಿಂದಾಗ್ಗೆ ವಿಧಿಸುವ ಷರತ್/ನಿಬಂಧನೆಗಳಿಗೆ ಪರವಾನಗಿದಾರರು ಬದ್ದರಾಗಿರಬೇಕು.

(5) ಸಂಸ್ಥೆಯ ಮಾಸಿಕ ಪರವಾನಿಗೆ ಶುಲ್ಕ ಬಾಕಿಯಿರಿಸಿಕೊಂಡಿರುವವರು/ಕಪ್ಪುಪಟ್ಟಿಗೆ ಸೇರಿರುವವರು, "ಇ"-ಹರಾಜು/ಟೆಂಡರ್/ಸಂಧಾನದಲ್ಲಿ ಭಾಗವಹಿಸಲು ಅರ್ಹರಲ್ಲ.

(6) ವಾಣಿಜ್ಯ ಮಳಿಗೆಗಳಲ್ಲಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

(7) ಕರಾರು ಒಪ್ಪಂದ ಮಾಡಿಕೊಳ್ಳುವ ಸಮಯದಲ್ಲಿ ಸೇಲ್ಸ್ ಟ್ಯಾಕ್ಸ್ ಕ್ಲಿಯರೆನ್ಸ್ ಸರ್ಟಿಫಿಕೇಟ್ ನೀಡುವುದು.

(8) ಮಳಿಗೆಯ ನೀರಿನ/ವಿದ್ಯುತ್ ಶುಲ್ಕವನ್ನು ಪ್ರತಿ ತಿಂಗಳು ಪರವಾನಗಿ ಶುಲ್ಕದದೊಂದಿಗೆ ಸಂಬಂಧಪಟ್ಟ ಘಟಕದಲ್ಲಿ ಪರವಾನಗಿದಾರರೇ ಪಾವತಿಸುವುದು.

(9) ಅಯ್ಕೆಗೊಂಡ ಪರವಾನಿಗೆದಾರರು ಮಳಿಗೆಯನ್ನು ಸ್ವತ: ನಡೆಸಬೇಕೆ ವಿನಹ ಪರಬಾರೆ ಮಾಡುವಂತಿಲ್ಲ.

(10) ಅಯ್ಕೆಗೊಂಡ ಪರವಾನಿಗೆದಾರರು ಕರಾರು ಒಪ್ಪಂದವನ್ನು ಮಾಡಿಕೊಂಡ ನಂತರವೇ ವಿಫಲರಾದ ಬಿಡ್‌ದಾರರ ಇಎಂಡಿ., ಹಣವನ್ನು ಹಿಂತಿರುಗಿಸಲಾಗುವುದು.

(11) ಆಯ್ಕೆಗೊಂಡ ಪರವಾನಗಿದಾರರು ಚಾಲ್ತಿಯಲ್ಲಿರುವ ಮಾಸಿಕ ಪರವಾನಗಿ ಶುಲ್ಕವನ್ನು ಆಯ ತಿಂಗಳ 07ನೇ ತಾರೀಖಿನೊಳಗೆ ಮತ್ತು ಸೇವಾ ತೆರಿಗೆ/ಜಿ.ಎಸ್.ಟಿಯನ್ನು ಆಯ ತಿಂಗಳ 05ನೇ ತಾರೀಖಿನೊಳಗೆ ಸಂಬಂಧಪಟ್ಟ ಘಟಕಗಳಲ್ಲಿ ಮುಂಗಡವಾಗಿ ಸಂದಾಯ ಮಾಡಬೇಕು.ತಪ್ಪಿದಲ್ಲಿ ವಾರ್ಷಿಕ ಶೇ 18% ಬಡ್ಡಿ ವಿದಿಸಲಾಗುತ್ತದೆ.

(12) ದ್ವಿಚಕ್ರ ವಾಹನ ನಿಲ್ದಾಣದಲ್ಲಿ ಇಬ್ಬರು ಅಂಗವಿಕಲರ ವಾಹನಗಳನ್ನು ಉಚಿತವಾಗಿ ನಿಲ್ಲಿಸಲು ಅವಕಾಶ ನೀಡಬೇಕು.ಲೈಸನ್ಸ್ ಶುಲ್ಕದೊಂದಿಗೆ ಸೇವಾ ತೆರಿಗೆ ಹಾಗೂ ಟಿ.ಸಿ.ಎಸ್. ನ್ನು ಪಾವತಿಸಬೇಕಾಗಿರುತ್ತದೆ.

(13) ಉಪಹಾರಗೃಹದಲ್ಲಿ ಕೇವಲ ಅಡುಗೆ ಅನಿಲ/ಇಲೆಕ್ಟ್ರಿಕಲ್ ಸ್ಟವ್‌ನ್ನು ಮಾತ್ರ ಉಪಯೋಗಿಸತಕ್ಕದ್ದು.

(14) ಪರವಾನಗಿದಾರರು ಬಿಡ್ ಮಾಡಿದ ಮೊತ್ತದಲ್ಲಿ ಹೆಚ್-01 ಬಿಡ್ಡುದಾರರನ್ನು ಆಯ್ಕೆ ಮಾಡಲಾಗುತ್ತದೆ. ಸೂಕ್ತ ಬಿಡ್

ಬಾರದೆ ಇದ್ದಲ್ಲಿ ಅಂಗೀಕರಿಸುವ/ತಿರಸ್ಕರಿಸುವ ಹಕ್ಕನ್ನು ಸಂಸ್ಥೆಯು ಕಾಯ್ದಿರಿಸಿಕೊಂಡಿದೆ.

ಮಳಿಗೆಗಳ ಕುರಿತು ಹೆಚ್ಚಿನ ಮಾಹಿತಿಗೆ ವಿಷಯ ನಿರ್ವಾಹಕರ ದೂರವಾಣಿ ಸಂಖ್ಯೆ 9740661585 ನ್ನು ವಿಭಾಗಸಂಚಲನಾಧಿಕಾರಿಯವರ ದೂರವಾಣಿ ಸಂಖ್ಯೆ:7760990802, ಸಹಾಯಕ ಸಂಚಾರ ವ್ಯವಸ್ಥಾಪಕರ ದೂರವಾಣಿ ಸಂಖ್ಯೆ,7760990811 ನ್ನು ಸಂಪರ್ಕಿಸಬಹುದಾಗಿದೆ

****************************

ಪ್ರತಿಯನ್ನು ವಂದನಾಪೂರ್ವಕವಾಗಿ:- ಮುಖ್ಯ ಸಂಚಾರ ವ್ಯವಸ್ಥಾಪಕರು(ವಾ), ಕ.ರಾ.ರ.ಸಾ.ಸಂಸ್ಥೆ, ಕೇಂದ್ರ ಕಛೇರಿ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ..

ಪ್ರತಿಯನ್ನು:- ವಿಭಾಗೀಯ ನಿಯಂತ್ರಣಾಧಿಕಾರಿ ಕ.ರಾ.ರ.ಸಾ.ಸಂಸ್ಥೆ, ಬೆಂಗಳೂರು (ಕೇಂದ್ರ): ಗ್ರಾಮಾಂತರ: ಬೆಂಗಳೂರು ಮಹಾನಗರ ಸಾರಿಗೆ, ಕೋಲಾರ, ಸಿರಸಿ, ಹಾಸನ, ಬಳ್ಳಾರಿ, ಗದಗ, ರಾಯಚೂರು, ಮಂಗಳೂರು, ಬೀದರ್, ದಾವಣಗೆರೆ,ತುಮಕೂರು, ಬಾಗಲಕೋಟೆ, ಗುಲ್ಬರ್ಗ, ಉತ್ತರ ಕನ್ನಡ, ಬಿಜಾಪುರ, ಬೆಳಗಾಂ, ಚಿಕ್ಕೋಡಿ, ಯಾದಗಿರಿ, ಹಾವೇರಿ,ಮೈಸೂರು (ನಗರ), ಇವರಿಗೆ ಕಳುಹಿಸುತ್ತಾ, ಪ್ರತಿಯನ್ನು ಬಸ್ ನಿಲ್ದಾಣಗಳಲ್ಲಿ ಆಸಕ್ತಿವುಳ್ಳವರಿಗಾಗಿ, ಸೂಚನಾಫಲಕದಲ್ಲಿ ಪ್ರದರ್ಶಿಸಲು ಕೋರಲಾಗಿದೆ.

ಪ್ರತಿಯನ್ನು :- ಲೆಕ್ಕಾಧಿಕಾರಿ, ಭದ್ರತಾ ಹಾಗೂ ಜಾಗೃತಾಧಿಕಾರಿ, ಕಾನೂನು ಅಧಿಕಾರಿ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮೈಸೂರು(ಗ್ರಾ) ವಿಭಾಗ ಇವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ. ದಿನಾಂಕ 12-03-2018 ರಂದು ನಡೆಯುವ ಸಂಧಾನ ಪ್ರಕ್ರಿಯೆಯಲ್ಲಿ ಹಾಜರಿರಲು ಸೂಚಿಸಲಾಗಿದೆ. **ಮಳಿಗೆಗಳು ಸುಸ್ಥಿತಿಯಲ್ಲಿ ಇರುವ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಮೈಸೂರು(ಗ್ರಾ) ವಿಭಾಗ ರವರು ಪರಿಶೀಲಿಸಿ ಅಗತ್ಯ ಕಾಮಗಾರಿ ಇದ್ದಲ್ಲಿ ಸೂಕ್ತಕ್ರಮ ಕೈಗೊಳ್ಳಲು ತಿಳಿಸಲಾಗಿದೆ.**

ಪ್ರತಿಯನ್ನು:- ಘಟಕ ವ್ಯವಸ್ಥಾಪಕರು, ಕೆ.ಆರ್.ನಗರ, ಹುಣಸೂರು, ,ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ ಇವರ ಮಾಹಿತಿಗಾಗಿ ಹಾಗೂ ಸದರಿ ಪ್ರತಿಯನ್ನು ಸೂಚನಾ ಫಲಕದಲ್ಲಿ ಹಾಕಲು ಸೂಚಿಸಲಾಗಿದೆ.

ಪ್ರತಿಯನ್ನು :-ಸಂಚಾರ ನಿಯಂತ್ರಕರು --------------- ಬಸ್ ನಿಲ್ದಾಣ --------------- ರವರ ಮಾಹಿತಿಗಾಗಿ ಕಳುಹಿಸುತ್ತಾ ಸಂಧಾನ ಪ್ರಕಟಣೆಯನ್ನು ಸೂಚನಾ ಫಲಕದಲ್ಲಿ ಪ್ರಕಟಿಸುವಂತೆ ಸೂಚಿಸಲಾಗಿದೆ

ವಿಭಾಗೀಯ ನಿಯಂತ್ರಣಾಧಿಕಾರಿ
ಮೈಸೂರು (ಗ್ರಾ) ವಿಭಾಗ, ಮೈಸೂರು